

ಮಾಡುವ ಈ ಎಲಿವೇಟರಿನ ಸಂಕ್ಷಿಪ್ತ ಒಳಾವರಣದೊಳಗೆ ಸದಾ ಉಸಿರು ಬಿಗಿಹಿಡಿದು ನಿಲ್ಲುವ ನನಗೆ, ಕೈಯೆಟುಕುವ ಅಂತರದಲ್ಲಿ ಏದುಸಿರಿಡುತ್ತಿದ್ದ ಎದುರಾಕೆಯನ್ನು ಕಂಡು ಬೇಜಾರನ್ನಿಸಿತು. ಅವಳು ಹೇಳಿದ, 'ಹುಡುಗೀರು ಹಾಳಾಗಿಹೋಗುತಾರೆ...' ಎಂಬ ಮಾತು ನಮ್ಮ ನಡುವಿನ ಇಕ್ಕಟ್ಟಿನೊಳಗೆ ಅನುರಣಿಸಿ ಕೇಳಿಸಿತು. ಹೆಣ್ಣು ಅಗತ್ಯವಿಲ್ಲದ ಲೋಕಜಂಜಟಕ್ಕೆ ತಲೆಗೊಟ್ಟಿದ್ದಾಳೆಂದು ಉತ್ಕಟವಾಗಿ ಅನ್ನಿಸಿಬಂತು. ಈ ಕುರಿತು ಬಾಯ್ದೆರೆದಾಡುವ ಮನಸಾಯಿತಾದರೂ ವಿಷಯವಿನ್ನೆಲ್ಲೋ ಸಾಗೀತೆಂದು ತಡೆದೆ.

ಇಷ್ಟಾಗಿ, ಈ ಸಲಿಲೆ ನನ್ನ ಮಟ್ಟಿಗೆ ಹೊಸಬಳೇನಲ್ಲ. ಇದೇ ಶಾಲೆಯಲ್ಲಿ ಓದಿದವಳು. ಹಿಂದೊಮ್ಮೆ ನನ್ನಿಂದಲೇ ವಿನ್ಯಾಸವೆಂಬುದರ ಕಾಗುಣಿತ ಕಲಿತವಳು. ಆದರೆ, ಯಾವ ಇಸವಿಯಲ್ಲೆಂದು ನನಗೆ ನೆನಪಿಲ್ಲ. ಈ ಶಾಲೆಯೊಡನೆಯ ನನ್ನ ಇಪ್ಪತ್ತೆಂಟು ವಯಸಿನ ಲೇವಾದೇವಿಯಲ್ಲಿ ಇವಳು ಯಾವಾಗ ಇಲ್ಲಿದ್ದಳೆಂದು ನನಗೆ ಗೊತ್ತಿಲ್ಲ. ಅಲ್ಲದೆ, ಈ ಶಾಲೆಯಲ್ಲಿ ನಾನು ಪೂರ್ಣಾವಧಿ ಶಿಕ್ಷಕನೇನಲ್ಲ. ವಾರಕ್ಕೆರಡು ಸರ್ತಿಯೆನ್ನುವ ಹಾಗೆ ಸೆಮಿಸ್ಟರು ಸೆಮಿಸ್ಟರಿಗೂ ನನ್ನ ಸೇವೆಯಿಸಿಕೊಳ್ಳುವ ಸದರಿ ಸ್ಕೂಲು–ನನ್ನನ್ನು ತೊಡಗಿಸಿಕೊಳ್ಳುವುದು ನಾನು ಅಭ್ಯಾಸನಿರತ ವಿನ್ಯಾಸಕನೆಂಬುದಕ್ಕೇ ಹೊರತು, ನನಗೆ ನಿಜವಾದ ಶಿಕ್ಷಣ ಗೊತ್ತೆನ್ನುವ ಕಾರಣಕ್ಕಲ್ಲ. ಅಸಲಿನಲ್ಲಿ, ಅದು ನನಗೆ ಗೊತ್ತೂ ಇಲ್ಲ. 'ಸಿಲಬಸು–ಪೆಡಗಾಗಿ'ಗಳ ಕಲಿಕೆ–ಬೋಧೆಯನ್ನು ನಾನು ಎಂದೂ ಅನುಮೋದಿಸಿದವನಲ್ಲ... ಇರಲಿ, ಸಲಿಲಾ ಸಂಕಾ ಎಂಬ ಪೂರ್ತಿಹೆಸರಿನ ತೆಲುಗುಮೂಲದ ಈ ಸಲಿಲೆ ಇಲ್ಲಿನ ಓರಗೆಯವರ ನಡುವೆ 'ಸಲಿಲ್' ಎಂದೇ ಹೆಸರುವಾಸಿ. ವಿದ್ಯಾರ್ಥಿಗಳಿಗೆ ಸಲಿಲ್–ಮ್ಯಾಮ್. ಕೆಲಕಾಲ ಯೂಎಸ್ಸಿನಲ್ಲಿದ್ದು, ನನ್ನದಕ್ಕೂ ಮಿಗಿಲಾದ ದೊಡ್ಡ ಓದು ಕೈಕೊಂಡು, ನಾಲ್ಕಾರು ವರ್ಷ ಅಲ್ಲಿಯೇ ದುಡಿದು, ಅಲ್ಲಿಯವನೊಬ್ಬನನ್ನು ಮದುವೆಯೂ ಆಗಿ... ಆ ಬಳಿಕ, ಎಂಥದೋ ಕಾರಣಕ್ಕೆ ಗಂಡನನ್ನೂ ತೊರೆದು ವಾಪಸಾದ ಇವಳು ನನ್ನೊಡನೆ ಮರುಸಂಪರ್ಕ ಬೆಳೆಸಿದ್ದು ಇದೇ ಶಾಲೆಯಲ್ಲಿ ನನ್ನ ಸಹಶಿಕ್ಷಕಿಯಾಗಿ. ಹೇಳಿಕೊಂಡು ಹೊರಟರೆ ಅದೇ ಒಂದು ಕತೆ. ಇನ್ನು, ಈ ಸಲಿಲೆಗೆ ನನ್ನನ್ನು ಕಂಡರೆ ಇವೊತ್ತಿಗೂ ವಿಪರೀತ ಆಸ್ಥಾಭಿಮಾನವುಂಟು. ಇನ್ನಿರದ ಅಕ್ಕರೆ ಗೌರವವುಂಟು. ಪುಸ್ತಕದೊಳಗಿನ ನಿಯತಿಗೂ ಹೆಚ್ಚಾಗಿ, ತರಗತಿಗೆ, ಡಿಸೈನು ಕುರಿತಾದ ನನ್ನ ಪ್ರಯೋಗಾಭ್ಯಾಸದ ಜ್ಞಾನ ತರುವೆನೆಂದೇನೋ–ಅವಳಿಗೆ ನನ್ನ ಬಗ್ಗೆ ಕಂಡಾಪಟ್ಟೆ ನೆಚ್ಚುಗೆ. ಎಂತಲೇ, ಅಕಸ್ಮಾತ್ ಯಾರಾದರೂ ನನ್ನನ್ನು ಟೀಕಿಸಿದಲ್ಲಿ, ಸಾಕ್ಷಾತ್ ನಾನೇ ನನ್ನನ್ನು ಸಮರ್ಥಿಸಿಕೊಳ್ಳುವ ಮಟ್ಟಿಗೆ ನನ್ನ ಪರವಹಿಸಿ ಮಾತನಾಡುವಳು. ನನ್ನ ಕುರಿತು ಹೆಮ್ಮೆ ಬೀಗುವಳು. ನನ್ನೆದುರಿನಲ್ಲಿರಲಿ, ಬೆನ್ನಿನಲ್ಲೂ ಪರಿಧಿ ಸರ್ ಪರಿಧಿ ಸರ್... ಎಂಬ ನಾಮ ಜಪಿಸಿ ಕೊಂಡಾಡುವಳು.

'ಟೆಲ್ಮೀ ಸಲಿಲಾ, ಏನಾಯಿತು? ಯಾಕೆ ಹೀಗೆ ಮೇಲೆ ನೋಡಿಕೊಂಡು ನಿಂತಿದ್ದೀ?' ಎಲಿವೇಟರಿನ ಇಳಿಕೆ ಸುರುಗೊಂಡಿದ್ದೇ ನಾನು ಮಾತಿಗಿಳಿದೆ.

'ಪರಿಧಿ ಸರ್, ನೀವಿದನ್ನ ನೋಡಿದಿರಾ?'

'ಯಾವುದನ್ನ?'

'ಇಕೋ, ಇಲ್ಲಿ ಬರೆದಿರೋದನ...' ಸಲಿಲೆ ನಿಂತಲ್ಲಿನಿಂದಲೇ ಕಣ್ಣುಹಾಯಿಸಿ ತೋರಿದ ಎಲಿವೇಟರಿನ ಮುಚ್ಚಿದ ಬಾಗಿಲಿನ ಮೇಲೆ ನಾನು ದೃಷ್ಟಿ ಹರಿಬಿಟ್ಟೆ. ಹೇಳಲಿಕ್ಕಿರಲಿ ನೋಡಲಿಕ್ಕೂ ಅಸಹ್ಯವೆನಿಸುವ ಬಲು ಅಸಭ್ಯವಾದ ಭಿತ್ತಿಕಲೆಯೊಂದು ಅಲ್ಲಿ ಕಾಣಸಿಕ್ಕಿತು. ಅದನ್ನು ನೋಡಿ ಗಂಡಸಾದ ನನಗೇ ನಾಚುಗೆಯೆನ್ನಿಸಿತಾಗಿ ತಕ್ಷಣ ತಲೆತಗ್ಗಿಸಿದೆ.

'ನಮ್ಮ ಡಿಯರ್ ಡೀನ್ ಇದರ ಬಗ್ಗೆ ಏನು ವ್ಯಾಖ್ಯಾನ ಹೇಳುತಾರೆ–ಗೊತ್ತಾ?' ಎಂದು ಕಿಸಕ್ಕನೆ ನಕ್ಕು ಹೇಳಿದ ಸಲಿಲೆ, ತಾಳಿದ ನಗು ಸಂಪನ್ನಗೊಳ್ಳುವ ಮುನ್ನವೇ ಮೋರೆಹಿಂಡಿ, 'ಡಿಸ್ಗಸ್ಟಿಂಗ್, ಪರಿಧಿ ಸರ್...' ಅಂತಂದಳು. ಎಲಿವೇಟರು–ಡೋರಿನ ಮೇಲೆ ಕಂಡ ಹೇಸಿಗೆಯನ್ನು ಅವಳು ಇನ್ನಷ್ಟು ಹೇಸಿ ಕಾಣಿಸುವ ಹಾಗೆ ಚರ್ಯೆ ಮಾಡಿದಳು. ಒಂದೇ ಗಳಿಗೆಗೆ ಹಾಸ್ಯ–ಬೀಭತ್ಸದ ಎರಡು ವಿಭಿನ್ನ ರಸಗಳು ತೋರಿಬಂದ ಕಣ್ಣೆದುರಿನ ಪರಮಾದೃಷ್ಟಕ್ಕೆ ನನ್ನನ್ನು ನಾನು